# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1352/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 12/11/2021

3/12/21

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ರಾಘವ ಡಿ. ತಂದೆ ಲೇಟ್ ದೇವು, ಕಿರಿಯ ಇಂಜನೀಯರ್, ಬ್ಯಾಕಂಪಾಡಿ ಉಪವಿಭಾಗ, ಕಾವೂರು ವಿಭಾಗ, ಮೆಸ್ಕಾಂ, ಮಂಗಳೂರು ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಮಂಗಳೂರು ಇವರು ದಕ್ಷಿಣ ಕನ್ನಡ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ರಾಘವ ಡಿ. ತಂದೆ ಲೇಟ್ ದೇವು, ಕಿರಿಯ ಇಂಜನೀಯರ್, ಬ್ಯಾಕಂಪಾಡಿ ಉಪವಿಭಾಗ, ಕಾವೂರು ವಿಭಾಗ, ಮೆಸ್ಕಾಂ, ಮಂಗಳೂರು (ಇನ್ನು ಮುಂದೆ 'ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಶ್ರೀ ಜಿತೇಶ್ ಎನ್. ಎಂ. ತಂದೆ ದಿ: ಕೆ. ವಿ. ನಾರಾಯಣ, ವಾಸ: ತೋಟಬೆಂಗ್ರೆ ಮನೆ, ಮಂಗಳೂರು ತಾ: ಜಿಲ್ಲೆ. (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) ದೂರಿನ ಸಂಕ್ಷಿಪ್ತ ವಿವರಣೆ:-

i. ದೂರುದಾರರು ಮಂಗಳೂರಿನ ಕ್ಲಾಸ್-1 ವಿದ್ಯುತ್ ಗುತ್ತಿಗೆದಾರರಾಗಿದ್ದು ಲೋಬೋ ಇಂಜನೀಯರಿಂಗ್ ಬೈಕಂಪಾಡಿ ಇವರ ಪರವಾಗಿ 10 ಹೆಚ್.ಪಿ. ಲೋಡಿಗಾಗಿ ಅರ್ಜಿ ಸಲ್ಲಿಸಿದ್ದು ಹಾಗೂ ದಿ: 15/03/2019 ರಂದು ಶ್ರೀ ಗೋಡ್ವಿನ್ ಮೊಂತೆರೊರವರ ಪರವಾಗಿ ಹೊಸ ಉದ್ದಿಮೆಯನ್ನು ಪ್ರಾರಂಭಿಸಲು 20 ಹೆಚ್. ಪಿ ಲೋಡಿಗಾಗಿ ಅರ್ಜಿ ಸಲ್ಲಿಸಿದ್ದು ಸದರಿ ಕನೆಕ್ಷನ್ ಕೊಡಲು ಎದುರುದಾರರರು 5,000/- ರೂ. ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು ಅದನ್ನು ಮೊಬೈಲ್‌ನಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿದ್ದು ಇರುತ್ತದೆ. ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು ದಕ್ಷಿಣ ಕನ್ನಡ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದಿನಾಂಕ 20/03/2019 ರಂದು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ದಕ್ಷಿಣ ಕನ್ನಡ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 01/2019 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

ii. ತನಿಖಾಧಿಕಾರಿಗಳು ದಿನಾಂಕ 20/03/2019 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಎದುರುದಾರರು ಲಂಚದ ಹಣ ಕೇಳಿದ ಬಗ್ಗೆ ದೂರುದಾರರು ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿದ್ದು, ಸರ್ಕಾರಿ ಕೆಲಸ ನಿರ್ವಹಿಸಲು ಲಂಚದ ಹಣಕ್ಕೆ ಒತ್ತಾಯ ಮಾಡಿರುವುದಾಗಿ ತಿಳಿಸಿದ್ದು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿರುತ್ತಾರೆ. ನಂತರ ಅದನ್ನು ಲಿಪಿಕರಣ ಮಾಡಿ ಅದನ್ನು ಸಿ.ಡಿ.ಗೆ ವರ್ಗಾಯಿಸಿದ್ದು ಇರುತ್ತದೆ. ನಂತರ ಲಂಚದ ಹಣ ರೂ. 5,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ

ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಸಂಭಾಷಣೆಯ ಸಿ.ಡಿ.ಯನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ಶ್ರೀ ಅರುಣ ಕುಮಾರ ತಂದೆ ಶ್ರೀ ರಾಮು, ದ್ವಿ.ದ.ಸ. ಅಬಕಾರಿ ಉಪ ಅಧೀಕ್ಷಕರ ಕಛೇರಿ, ಮಂಗಳೂರು ಉಪವಿಭಾಗ-2 ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರ್ ಅನ್ನು ನೀಡಿದ್ದು ಅದನ್ನು ತನ್ನ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ತಲೆಯನ್ನು ಕೈಯಿಂದ ಸವರಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

iii. ದಿನಾಂಕ 20/03/2019 ರಂದು ಮಂಗಳೂರು ಬೈಕಂಪಾಡಿ ಎ.ಪಿ.ಎಂ.ಸಿ. ಕಟ್ಟಡದಲ್ಲಿರುವ ಮೆಸ್ಕಾಂ ಶಾಖಾಧಿಕಾರಿ ಕಛೇರಿಯಲ್ಲಿ ದೂರುದಾರರು ನೆರಳು ಸಾಕ್ಷಿ ಶ್ರೀ ಅರುಣ ಕುಮಾರ ಇವರೊಂದಿಗೆ ಭೇಟಿಯಾದಾಗ ಎದುರುದಾರರು ಏನು ಎಂದು ಕೇಳಿದಾಗ ದೂರುದಾರರು 20 ಹೆಚ್. ಪಿ. ಲೋಡ್ ಬೇಕು ಎಂದು ಮೊಂತೆರೊರವರ ಫೈಲನ್ನು ಎದುರುದಾರರ ಟೇಬಲ್ ಮೇಲೆ ಇಟ್ಟು 20 ಹೆಚ್ ಪಿ. ಲೋಡ್ ಬೇಕು ಎಂದು ಕೇಳಿದಾಗ ಅವರು ಲೋಡ್ ಇಲ್ಲ 10 ಹೆಚ್ ಪಿ ಲೋಡ್ ಮಾತ್ರ ಕೊಡಲು ಆಗುತ್ತದೆ. ಟಿ.ಸಿ.ಯಲ್ಲಿ ಲೋಡ್ ಇಲ್ಲ ಎಂದು ತಿಳಿಸಿರುತ್ತಾರೆ. ಆಗ ದೂರುದಾರರು ಹೇಗಾದರೂ ಮಾಡಿ ಲೋಡ್ ಕೊಡಿ ಎಂದು ಹೇಳಿ ಲಂಚವಾಗಿ ಕೊಡಬೇಕಾದ 5,000/- ರೂ.ನ್ನು ಜೇಬಿನಿಂದ ತೆಗೆದು ಅದರಲ್ಲಿ 3,000/- ರೂ. 20 ಹೆಚ್. ಪಿ. ಲೋಡಿಗೆ 2,000/- ರೂ. ಲೋಬೋ ಇಂಜನೀಯರಿಂಗ್ ಫೈಲಿಗೆ ಎಂದು ಹೇಳಿರುತ್ತಾರೆ. ಹಣವನ್ನು ಟೇಬಲ್ಲಿನಲ್ಲಿ ಇಡುವಂತೆ ಕೈ ಸನ್ನೆ ಮಾಡಿರುತ್ತಾರೆ. ಆಗ ದೂರುದಾರರು ಪಿನಾಪ್ತಲಿನ್ ಲೇಪಿತ 5,000/- ರೂ.ನ್ನು ಟೇಬಲ್ ಮೇಲೆ ಇಟ್ಟಾಗ ಎದುರುದಾರರು "ಫೈಲನ್ನು ನೋಡುತ್ತೇನೆ, ಎಸ್ಟಿಮೇಟ್ ಮಾಡಿ ಕಳುಹಿಸುತ್ತೇನೆ" ಎಂದು ಹೇಳುತ್ತಾ ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಬಲಗೈಯಿಂದ ಗೋಡ್ವಿನ್ ಮೊಂತೆರೊ ಫೈಲನಲ್ಲಿ ಹಾಕಿರುತ್ತಾರೆ. ಆಗ ದೂರುದಾರರು ಹೊರಗೆ ಬಂದು ಕೈಯಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ನಿಗದಿತ ಸೂಚನೆಯನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತಾರೆ. ತಕ್ಷಣ ಜೊತೆಯಲ್ಲಿದ್ದ ಕೊ-ಪಂಚ ಉಳಿದ ಸಿಬ್ಬಂಧಿ ಮತ್ತು ತನಿಖಾಧಿಕಾರಿಯವರು ಎದುರುದಾರರ ಕಛೇರಿಯ ಒಳಗೆ ಬಂದು ತನಿಖಾಧಿಕಾರಿಗಳು ತಮ್ಮ ಪರಿಚಯವನ್ನು ನೀಡಿ ಅಲ್ಲಿಯ ನಡುವಳಿಕೆಗಳನ್ನು ತಿಳಿದು ಪಿನಾಪ್ತಲಿನ್ ಲೇಪಿತ ರೂ. 5,000/- ಲಂಚದ ಹಣವನ್ನು ಗೋಡ್ವಿನ್ ಮೊಂತೆರೊ ಫೈಲಿನಿಂದ ತೆಗೆದು ಹಾಜರುಪಡಿಸಿದ್ದು ಸದರಿ ನೋಟುಗಳ ಮುಖಬೆಲೆ ಹಾಗೂ ಕ್ರಮ

ಸಂಖ್ಯೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಬರೆದುಕೊಂಡಂತಹ ನೋಟುಗಳ ಮುಖಬೆಲೆ ಮತ್ತು ಕ್ರಮ ಸಂಖ್ಯೆಯು ತಾಳೆಯಾಗಿದ್ದು ಇರುತ್ತದೆ. ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ದ್ರಾವಣಗಳನ್ನು ಪ್ರತ್ಯೇಕ ಗಾಜಿನ ಬಾಟಲ್‌ಗಳಲ್ಲಿ ಸಂಗ್ರಹಿಸಿ ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ. ತನಿಕಾಧಿಕಾರಿಗಳು ಗೊಡ್ವಿನ್ ಮೊಂತೆರೊ ಫೈಲ್‌ನ ಒಳಗಡೆ ಇಟ್ಟಂತಹ ಫೈಲಿನ ಪುಟವನ್ನು ಹತ್ತಿಯಿಂದ ವರೆಸಿ ಆ ಹತ್ತಿಯನ್ನು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಅದನ್ನು ಖಾಕಿ ಕವರಿನಲ್ಲಿ ಹಾಕಿ ಅಂಟಿಸಿ ದೂರುದಾರರ, ಪಂಚರ ಸಹಿಗಳನ್ನು ಪಡೆದು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಅಮಾನತ್ ಪಂಚನಾಮೆ ಕಾಲದಲ್ಲಿ ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಮೇಲಾಧಿಕಾರಿಯವರಾದ ಶ್ರೀ ದೀಪಕ್ ಸಿ. ಆರ್. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಬೈಕಂಪಾಡಿ, ಕೈಗಾರಿಕಾ ಉಪವಿಭಾಗ, ಪಣಂಬೂರು ಇವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಶಾಖಾ ಕಛೇರಿಗೆ ಬರುವಂತೆ ತಿಳಿಸಿದ್ದರ ಮೇರೆಗೆ ಸದರಿಯವರು ಶಾಖಾ ಕಛೇರಿಗೆ ಬಂದಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪಂಚನಾಮೆಯನ್ನು ಪೂರೈಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರು ಲಂಚಕ್ಕಾಗಿ ಒತ್ತಾಯಿಸಿದ ಸಂಭಾಷಣೆಯನ್ನು ಸಿ.ಡಿ.ಯಲ್ಲಿ ವರ್ಗಾಯಿಸಿದ್ದು ಅದನ್ನು ಲ್ಯಾಪ್‌ಟಾಪ್‌ಗೆ ಅಳವಡಿಸಿ ಶ್ರೀ ದೀಪಕ್ ಸಿ.ಆರ್. ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ್ (ವಿ) ಇವರು ಧ್ವನಿಗಳನ್ನು ಆಲಿಸಿ ಅದರಲ್ಲಿ ಒಂದು ಧ್ವನಿ ಎದುರುದಾರರ ಧ್ವನಿ ಎಂದು ದೃಢಪಡಿಸಿರುತ್ತಾರೆ. ಅರ್ಜಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ತನಿಖಾಧಿಕಾರಿಗಳು ವಶಪಡಿಸಿ ಕೊಂಡಿರುತ್ತಾರೆ. ತನಿಖಾಧಿಕಾರಿ ಯವರು ಎದುರುದಾರರಿಗೆ ಸಮಜಾಯಿಷಿ ಕೇಳಲಾಗಿ ಸದರಿಯವರು "ನಾನು ಯಾರಲ್ಲಿಯೂ

ದುಡ್ಡು ಕೇಳುವುದಿಲ್ಲ. ದುಡ್ಡು ಬೇಕಾದರೆ ಹೇಳಿ ಎಂದು ಕೂಡ ಗುತ್ತಿಗೆದಾರರು ಕೇಳಿದ್ದು ನನ್ನ ವಿಷಯ ನಿಮಗೆ ತಿಳಿದಿದೆ, ನಾನು ಯಾರಲ್ಲಿಯೂ ದುಡ್ಡು ಕೇಳುವುದಿಲ್ಲವೆಂದು ಅವರಿಗೆ ತಿಳಿಸಿರುತ್ತೇನೆ. ಫೋನಿನಲ್ಲಿಯೂ ಮತ್ತು ನನ್ನನ್ನು ಭೇಟಿಯಾದಾಗಲೂ ತಿಳಿಸಿರುತ್ತೇನೆ. ಈ ದಿನ ಬೆಳಗ್ಗೆ ಬಂದವರೂ ಈ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. ಈ ದಿನ ಬೆಳಗ್ಗೆ ಕೂಡ ನನಗೆ ದುಡ್ಡಿನ ಅವಶ್ಯಕತೆ ಇಲ್ಲ. ನಾನು ಎಸ್ಟಿಮೇಟ್ ಮಾಡಿಕೊಡುತ್ತೇನೆ. ಯಾರಿಗೂ ತೊಂದರೆ ಇಲ್ಲಿತನಕ ಮಾಡಿಲ್ಲ, ಇನ್ನು ಮಾಡುವುದಿಲ್ಲವೆಂದು ತಿಳಿಸಿ ಹೇಳುತ್ತೇನೆ. ದೂರುದಾರರು ಫೈಲಿನ ಜೊತೆ ಇರಿಸಿ ದುಡ್ಡು ಟೇಬಲ್ ಮೇಲಿಟ್ಟು ಹೋಗಿರುತ್ತಾರೆ. 1,000/- ರೂ. ನೋಟು ಫೈಲಿನಿಂದ ಸ್ವಲ್ಪ ಹೊರಗೆ ಬಂದು ಕಾಣುತ್ತಿತ್ತು. ಟೇಬಲ್ ಮೇಲೆ ಫೈಲ್ ಇಟ್ಟು ದೂರುದಾರರು ಹೊರಗೆ ಹೋಗಿರುತ್ತಾರೆ." ಎಂದು ವ್ಯತಿರಿಕ್ತ ಹೇಳಿಕೆ ನೀಡಿರುತ್ತಾರೆ.

iv. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

v. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಯನ್ನು ದಿನಾಂಕ 30/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ದೂರುದಾರರಿಂದ "ನಾನು ಯಾವುದೇ ಹಣವನ್ನು ಸ್ವೀಕರಿಸಿರುವುದಿಲ್ಲ. ಉಳಿದ ಎರಡು ಕಡತಗಳಿಗೆ ಗೊಡ್ವಿನ್ ಮೊಂತೆರೋ ಮತ್ತು ಲೋಬೋ ಇಂಜನೀಯರಿಂಗ್‌ರವರು ಕ್ರಮವಾಗಿ 3,000/- ರೂ. ಮತ್ತು 2,000/- ರೂ. ಕೊಟ್ಟರೆ ಕೊಡುತ್ತೇನೆ ಎಂದು ದೂರಿರುವುದು ಸರಿಯಲ್ಲ. ಪರಿವರ್ತಕದಲ್ಲಿ ಅಧಿಕ ಹೊರೆ ಇದ್ದ ಕಾರಣ ಗುತ್ತಿಗೆದಾರರಿಗೆ ತಾಂತ್ರಿಕ ಸಾಧ್ಯತೆ ಇರುವುದಿಲ್ಲ ಎಂದು ತಿಳಿಸಿರುತ್ತೇನೆ. ಇನ್ನು ಮುಂದಕ್ಕೆ ಹೊಸ ಪರಿವರ್ತಕ ಅಳವಡಿಸಿದಲ್ಲಿ

ಅಥವಾ ಪರಿವರ್ತಕದ ಸಾಮರ್ಥ್ಯವನ್ನು ಹೆಚ್ಚಿಸಿದಲ್ಲಿ ಎಂಬ ಅರ್ಥದಲ್ಲಿ ಮಾತ್ರ ನೋಡೋಣ ಎಂದು ತಿಳಿಸಿರುತ್ತೇನೆ ವಿನಹ ಕಂಪೆನಿಯ ಕೆಲಸದಲ್ಲಿ ಯಾವುದೇ ನಿರ್ಲಕ್ಷತನವನ್ನು ತೋರಿಸಿರುವುದಿಲ್ಲ," ಜೊತೆಗೆ ಜಪ್ತಿ ಪಂಚನಾಮೆಯ ಎಲ್ಲಾ ಅಂಶಗಳನ್ನು ನಿರಾಕರಿಸಿರುವುದಲ್ಲದೆ ಮೊಬೈಲ್‌ನಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಶ್ರೀ ದೀಪಕ್ ಸಿ. ಆರ್. ಅವರು ಒಂದು ಧ್ವನಿ ಎದುರುದಾರರಿದೆಂದು ಗುರ್ತಿಸಿರುವುದು ಸುಳ್ಳು ಎಂದು ಸಂಪೂರ್ಣ ವಿಷಯ ಸಂಗತಿಗಳನ್ನು ನಿರಾಕರಿಸಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಯಲ್ಲಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

3) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

4) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

6) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

3/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.